ಪ್ರವೇಶ ಪಡೆದವರ ಸಂಖ್ಯೆ ಎಷ್ಟು? ವರ್ಷದಿಂದ ವರ್ಷಕ್ಕೆ ಸರ್ಕಾರಿ ಕೋಟಾ ಇದು ಹೆಚ್ಚಾಗಬೇಕಿತ್ತಲ್ಲವೆ? ಹಾಗೆ, ಆಗಿದೆಯೇ? ಇಲ್ಲವಾದಲ್ಲಿ ಕಡಿಮೆ ಆಗಿರಲು ಕಾರಣವೇನು? ಕಡಿಮೆ ಆಗಿದ್ದಲ್ಲಿ ಖಾಸಗೀ ಕಾಲೇಜುಗಳಲ್ಲಿ ಕಡಿಮೆ ಏನಾದರೂ ಆಗಿದೆಯೋ? ವಿದ್ಯಾರ್ಥಿಗಳಿಗೆ ತಪ್ಪಿರಬಹುದಾದ ಅವಕಾಶ ಸರಿದೂಗಿಸಲು ಸರ್ಕಾರ ಏನು ಕ್ರಮ ಕೈಗೊಳ್ಳುವುದು.

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು) : ಮಾನ್ಯ ಉಪಾಧ್ಯಕ್ಷೀಣಿಯವರೆ, ಮಾನ್ಯ ಆರೋಗ್ಯ ಸಚಿವರ ಪರವಾಗಿ ಈ ಹೇಳಿಕೆಯನ್ನು ಮಾಡಬಯಸುತ್ತೇನೆ.

ಅರ್ಹತೆ ಆಧಾರದ ಮೇಲೆ ಮೊದಲ ವರ್ಷದ ವೈದ್ಯಕೀಯ ಶಿಕ್ಷಣದ ಪ್ರವೇಶಕ್ಕೆ ನಡೆದ ಅಂತಿಮ ಸಂದರ್ಶನ ಕಾರ್ಯಕ್ರಮ 6-9-91ರಂದು ಮುಕ್ತಾಯಗೊಂಡಿದ್ದು, ಇಂದು ಅಥವಾ ನಾಳೆ ವಿದ್ಯಾರ್ಥಿಗಳ ಆಯ್ಕೆ ಪಟ್ಟಿಯನ್ನು ಬಿಡುಗಡೆ ಮಾಡಲಾಗುವುದು. ಅಂಕಿ ಅಂಶಗಳ ವಿವರ ಈ ರೀತಿ ಇದೆ. ಬೆಂಗಳೂರು 200 ಸೀಟುಗಳು, ಮೈಸೂರು 175, ಹುಬ್ಬಳ್ಳಿ 130, ಬಳ್ಳಾರಿ 130 ಸೀಟುಗಳು.

4) ಬೆಂಗಳೂರು ವರ್ತುಲ ರಸ್ತೆಯ ನಿರ್ಮಾಣ

SRI SADATH ALI KHAN : The Hon'ble Minister for Public Works may be pleased to state that there is a proposal to construct the Ring Road around Bangalore City to regulate the heavy vehicular traffic coming from outside the City.

What is the total estimated cost of the length of the Circular Road constructed so far?

Amount spent sofar?

When the Circular Road will be completed? Whether there was a proposal to construct a direct road between Bangalore and Mysore in the P.W.D. Department; Whether Official tenders were to be called for from private agencies to construct the road;

What is the position?

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಉಪಾಧ್ಯಕ್ಷೀಣಿಯವರೆ, ಈ ಸಮಸ್ಯೆಗಳ ಬಗ್ಗೆ ಸಂಬಂಧಪಟ್ಟ ಸಚಿವರ ಗಮನಕ್ಕೆ ತಂದು ಕಾರ್ಯಕ್ರಮ ಕೈಗೊಳ್ಳಲಾಗುವುದು.

5) ಸೀಮಿತ ಆದಾಯವನ್ನು ಹೊಂದಿರುವ ಮಂಡಲ ಪಂಚಾಯಿತಿಗಳಿಗೆ ಸರ್ಕಾರದ ವಿಶೇಷ ಅನುದಾನ

ಶ್ರೀ ವಸಂತ ವಿ. ಸಾಲಿಯಾನ : ರಾಜ್ಯದಲ್ಲಿ ಗ್ರಾಮೀಣ ಪ್ರದೇಶದಲ್ಲಿರುವ ಹೆಚ್ಚಿನ ಮಂಡಲ ಪಂಚಾಯಿತಿಗಳು ಸೀಮಿತ ಆದಾಯವನ್ನು ಹೊಂದಿದ್ದು ಅಭಿವೃದ್ಧಿ ಕಾರ್ಯಗಳನ್ನು ಅನುಷ್ಠಾನಿಸಲು ಕಷ್ಟವಾಗುತ್ತಿದೆ. ಅಂಥ ಕಡಿಮೆ ಆದಾಯವಿರುವ ಮಂಡಲ ಪಂಚಾಯತ್‌ಗಳಿಗೆ ಸರ್ಕಾರ ವಿಶೇಷ ಅನುದಾನಗಳನ್ನು ನೀಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಕೆ.ಎಚ್. ಪಾಟೀಲ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿ) ಮಾನ್ಯ ಅಧ್ಯಕ್ಷರೇ, ಕರ್ನಾಟಕ ಪ್ರಜಾಪ್ರಭುತ್ವದ ವಿಕೇಂದ್ರೀಕರಣದಡಿಯಲ್ಲಿ ಅನೇಕ ಅಧಿಕಾರಗಳನ್ನು ಮಂಡಲ ಪಂಚಾಯಿತಿಗಳು ಮತ್ತು ಜಿಲ್ಲಾಪರಿಷತ್ತುಗಳಿಗೆ ನೀಡಲಾಗಿದೆ. ಇದರಿಂದ ಆಯಾ ಪ್ರದೇಶದ ಅಭಿವೃದ್ಧಿಗಳ ಯೋಜನೆಗಳನ್ನು ತಯಾರಿಸಲು ಮತ್ತು ಫಲಾನುಭವಿಗಳನ್ನು ಗುರುತಿಸಲು ಮತ್ತು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಅನುಕೂಲವಾಗುತ್ತದೆ.

2. ಈ ದಿಶೆಯಲ್ಲಿ ಕರ್ನಾಟಕವು ಯೋಜನೆಗಳನ್ನು ವರ್ಗಾವಣೆ ಮಾಡುವುದಲ್ಲದೆ ಅನೇಕ ಸಂಪನ್ಮೂಲಗಳನ್ನು ಮಂಡಲ ಪಂಚಾಯಿತಿ ಜಿಲ್ಲಾ ಪರಿಷತ್ತುಗಳಿಗೆ ನೀಡಿದೆ.

1) ರಾಜ್ಯ ಸರ್ಕಾರದ ಯೋಜನೆಗಳಲ್ಲಿ ಅವುಗಳ ಬಾಬ್ತುಗಳು
2) ಕೇಂದ್ರ ಸರ್ಕಾರದ ಯೋಜನೆಗಳಲ್ಲಿ ನಿರ್ದಿಷ್ಟಪಡಿಸಿರುವ ಯೋಜನೆಗಳು.
3) ಯೋಜನೇತರ ಅಡಿಯಲ್ಲಿ ನಿರ್ವಹಣೆಗಾಗಿ ಇರುವ ಅನುದಾನ
4) ಇದಲ್ಲದೆ ಕರ್ನಾಟಕ ಜಿಲ್ಲಾಪರಿಷತ್ ತಾಲ್ಲೂಕು ಪಂಚಾಯ್ತಿ ಮಂಡಲ ಪಂಚಾಯಿತಿಗಳು ಮತ್ತು ನ್ಯಾಯ ಪಂಚಾಯ್ತಿಗಳ ಅಧಿನಿಯಮ 1983ರ ಕಲಂ 114(3) ರನ್ವಯ 1981 ಜನಗಣತಿ ಆಧಾರದ ಮೇಲೆ ಮಂಡಲದ ವ್ಯಾಪ್ತಿಯಲ್ಲಿ ವಾಸಿಸುವ ಪ್ರತಿಯೊಬ್ಬ ವ್ಯಕ್ತಿಗೆ 10 ರೂ ದರದಲ್ಲಿ ತಲಾನುದಾನವನ್ನು ಕೊಡಲಾಗುತ್ತದೆ.
5) ಜಿಲ್ಲಾಪರಿಷತ್ ಕಾಯ್ದೆ ಕಲಂ 116ಕನ್ವಯ ಆಯಾ ಮಂಡಲ ಪಂಚಾಯಿತಿಗಳು ತೆರಿಗೆಗಳು ಮತ್ತು ಫೀಜುಗಳನ್ನು ವಸೂಲಿ ಮಾಡಿ ಮಂಡಲ ಪಂಚಾಯಿತಿಗಳ ವರಮಾನವನ್ನು ಹೆಚ್ಚಿಸಿಕೊಳ್ಳಬಹುದಾಗಿದೆ.
6) ಜಿಲ್ಲಾಪರಿಷತ್ ಕಾಯ್ದೆಯಲ್ಲಿ ಫೈನಾನ್ಸ್ ಕಮೀಷನ್‌ನ್ನು ರಚಿಸಿದ್ದು ಅದು ತನ್ನ ಶಿಫಾರಸ್ಸುಗಳನ್ನು ನೀಡಿದೆ. ಈ ಶಿಫಾರಸ್ಸುಗಳು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

6) ರಾಜ್ಯದಲ್ಲಿ ಜಿಲ್ಲಾಪರಿಷತ್‌ಗಳಿಂದ ಸಣ್ಣಕೆರೆಗಳು ಮತ್ತು ಜಲಾಶಯಗಳ ನಿರ್ಮಾಣ

ಶ್ರೀ ಪಿ.ಸಿ. ಸಿದ್ದನಗೌಡರ್ : ರಾಜ್ಯದಲ್ಲಿ ಜಿಲ್ಲಾ ಪರಿಷತ್ತು ಬಂದನಂತರ ನಿರ್ಮಾಣ ಸಣ್ಣ ಕೆರೆಗಳು ಮತ್ತು ಜಲಾಶಯಗಳನ್ನು ರೂಪಿಸಲು ಎಷ್ಟು ಹೆಕ್ಟೇರ್ ಒಳಗಿರುವ ಪ್ರದೇಶವನ್ನು ನಿರ್ಮಿಸಲು ಕೊಟ್ಟಿದ್ದೀರಿ? ಈ ಯೋಜನೆಯನ್ನು ಜಿಲ್ಲಾ ಪರಿಷತ್ ವ್ಯಾಪ್ತಿಯಿಂದ ಹಿಂತಿರುಗಿ ಪಡೆಯುವ ಯೋಜನೆ ಸರ್ಕಾರಕ್ಕಿದೆಯೇ? ಯಾವಾಗ ಪಡೆಯುವಿರಿ?

ಶ್ರೀ ಕೆ.ಎಚ್. ಪಟೇಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಮಂತ್ರಿ):

ಮಾನ್ಯ ಅಧ್ಯಕ್ಷರೇ, ಜಿಲ್ಲಾ ಪರಿಷತ್ ತಾಲ್ಲೂಕು ಪಂಚಾಯತ್ ಸಮಿತಿ ಮಂಡಲ ಪಂಚಾಯತ್ ಮತ್ತು ನ್ಯಾಯ ಪಂಚಾಯತ್ 1983ರ ಕಾಯಿದೆಯಡಿಯಲ್ಲಿ ಹೊರಡಿಸಲಾದ ಸರ್ಕಾರದ ಆದೇಶಕ್ಕನುಗುಣವಾಗಿ 200ಹೆಕ್ಟೇರು ಅಚ್ಚುಕಟ್ಟಿನ ಒಳಗಿರುವ ಕೆರೆಗಳನ್ನು ನಿರ್ವಹಿಸಲು ಜಿಲ್ಲಾ ಪರಿಷತ್ತುಗಳಿಗೆ ವಹಿಸಿಕೊಡಲಾಗಿದೆ. ನಿರ್ವಹಣಾ ವೆಚ್ಚವನ್ನು ವಾರ್ಷಿಕ ಯೋಜನೆಯಲ್ಲಿ ನಿಗದಿಪಡಿಸಿದಂತೆ ಬಿಡುಗಡೆ ಮಾಡಲಾಗುತ್ತಿದೆ. ಜಿಲ್ಲಾ ಪರಿಷತ್ ಹಾಗೂ ಮಂಡಲ ಪಂಚಾಯತ್‌ಗಳು ತಮ್ಮ ಆರ್ಥಿಕ ವ್ಯವಸ್ಥೆಗನುಗುಣವಾಗಿ ಹೊಸ ಕಾಮಗಾರಿಗಳನ್ನು ಕೈಗೊಳ್ಳಲು ಅವಕಾಶವಿದೆ.